# ಡಿ.15ರಿಂದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ ರಾಜ್ಯ ಸಮ್ಮೇಳನ

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ 33ನೇ ರಾಜ್ಯ ಸಮ್ಮೇಳನ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಡಿಸೆಂಬರ್ 15 ರಿಂದ ಡಿಸೆಂಬರ್ 17ರ ವರೆಗೆ ಮೂರು ದಿನಗಳ ಕಾಲ ನಡೆಯಲಿದೆ ಎಂದು ಸಮ್ಮೇಳನದ ಸಂಘಟನಾ ಅಧ್ಯಕ್ಷರಾದ ಡಾ. ವಿದ್ಯಾ ಥೊಬ್ಬಿ ಮತ್ತು ಡಾ. ಶೈಲಜಾ ಬಿದರಿ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಸಮ್ಮೇಳನದ ಮುನ್ನಾ ದಿನ ಡಿಸೆಂಬರ್ 14 ರಂದು ಗುರುವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಹನುಮಂತರಾಯ ರಂಗಮಂದಿರ ವರೆಗೆ ಬೇಟಿ ಬಚಾವೋ, ಬೇಟಿ ಪಡಾವೋ ವಾಕಥಾನ್ ನಡೆಯಲಿದೆ. ಈ ವಾಕಥಾನ್‌ಗೆ ಜಿಲ್ಲಾಧಿಕಾರಿ ಟಿ. ಭೂಬಾಲನ್ ಚಾಲನೆ ನೀಡಲಿದ್ದಾರೆ. ವಿಜಯಪುರ ಎಸ್.ಪಿ ರಿಶಿಕೇಶ ಸೋನಾವಣೆ ಚಾಲನೆ ನೀಡಲಿದ್ದಾರೆ. ಬಳಿಕ 9.30 ಗಂಟೆಗೆ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಟಿ. ಭೂಬಾಲನ್ ಸಂಘದ ರಾಜ್ಯಾಧ್ಯಕ್ಷೆ ಡಾ. ವಿದ್ಯಾ ಥೊಬ್ಬಿ, ಡಾ. ರಾಜಶ್ರೀ ಪಲಾಡಿ ಅವರು ಹೆಣ್ಣುಮಗು ಉಳಿಸಿ ವಿಷಯದಡಿ ಮಾತನಾಡಲಿದ್ದಾರೆ.

ಡಿಸೆಂಬರ್ 15 ರಂದು ಶುಕ್ರವಾರ ಸಂಜೆ 6.30 ಗಂಟೆಗೆ ವೈದ್ಯಕೀಯ ಕಾಲೇಜಿನ ಗ್ರಂಥಾಲಯ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ವಿಜಯಪುರ– ಗದಗ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಅಲ್ಲದೇ, ಬಿ.ಎಲ್.ಡಿ.ಇ ಡೀಮ್ಡ್ ವಿವಿಯ ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಆರ್. ಎಸ್. ಮುಧೋಳ, ಪ್ರಿನ್ಸಿಪಾಲ್ ಡಾ. ಅರವಿಂದ ಪಾಟೀಲ, ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ ಡಾ. ಎಂ. ಜಿ. ಹಿರೇಮಠ, ಡಾ. ಎಚ್. ನಾಗರಾಜ, ಡಾ. ರಾಜಶ್ರೀ ಪಲಾಡಿ, ಡಾ. ಕಸ್ತೂರಿ ವಿ. ಡೋಣಿಮಠ, ಡಾ. ಭಾರತಿ ರಾಜಶೇಖರ, ಡಾ. ಸುಮನ ಗಡ್ಡಿ, ಅಲ್– ಅಮೀನ ವೈದ್ಯಕೀಯ ಕಾಲೇಜಿನ ಡಾ. ಬಿ. ಎಸ್. ಪಾಟೀಲ, ಸಮ್ಮೇಳನಾ ಸಂಘಟನಾ ಕಾರ್ಯದರ್ಶಿ ಡಾ. ನೀಲಮ್ಮ ಪಾಟೀಲ, ಡಾ. ಶೋಭಾ ಗುಡದಿನ್ನಿ, ಡಾ. ಗೀತಾ ಚೌಧರಿ, ಡಾ. ಕಿರಣ ಓಸ್ವಾಲ್ ಉಪಸ್ಥಿತರಿರಲಿದ್ದಾರೆ.

ಈ ಕಾರ್ಯಕ್ರಮಕ್ಕೂ ಮೊದಲು ವೃತ್ತಿ ಕೌಶಲ್ಯ ಅಭಿವೃದ್ಧಿ ಕುರಿತು ಐದು ಕಾರ್ಯಾಗಾರಗಳು ನಡೆಯಲಿವೆ.

ಡಿಸೆಂಬರ್ 16 ಮತ್ತು 17 ರಂದು ಕ್ಯಾನ್ಸರ್ ತಡೆಗಟ್ಟುವಿಕೆ, ಸೌಂದರ್ಯವರ್ಧಕ ಸ್ತ್ರೀರೋಗ ಶಾಸ್ತ್ರ, ಎಂಡೊಸ್ಕೋಪಿ ಮತ್ತು ಲ್ಯಾಪ್ರೊಸ್ಕೋಪಿ ಚಿಕಿತ್ಸಾ ವಿಧಾನ, ಕ್ರಿಟಿಕಲ್ ಕೇರ್ ಮತ್ತು ನವಜಾತ ಶಿಶುಗಳ ಆರೈಕೆ ಸೇರಿದಂತೆ ಒಟ್ಟು ಏಳು ವಿಷಯಗಳ ಕುರಿತು ವೈಜ್ಞಾನಿಕ ಗೋಷ್ಠಿಗಳು ನಡೆಯಲಿವೆ. ಈ ಸಂದರ್ಭದಲ್ಲಿ ಖ್ಯಾತ ತಜ್ಞವೈದ್ಯರಾದ ಡಾ. ವಿದ್ಯಾ ಪಂಚೊಲಿಯಾ, ಡಾ. ಕಾಮಿನಿ ರಾವ, ಡಾ. ಸೋಮಶೇಖರ ಪಾಟೀಲ, ಡಾ. ಹೇಮಾ ದೀವಾಕರ ಮೂರು ದಿನಗಳ ಈ ಸಮ್ಮೇಳನದಲ್ಲಿ ದೇಶ–ವಿದೇಶಗಳಿಂದ ಸುಮಾರು 1200 ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರ ಸಂಘದ ವತಿಯಿಂದ 13 ಫೆಲೋಶಿಪ್ ನೀಡಲಾಗುತ್ತಿದ್ದು, ಸ್ವಾಸ್ಥ್ಯ– ಸಖಿ ಹೆಲ್ತ್‌ಕೇರ್ ಯೋಜನೆಯಡಿ ಸುಮಾರು 500ಕ್ಕೂ ಹೆಚ್ಚು ಆರೋಗ್ಯ ಕಾರ್ಯಕರ್ತರಿಗೆ ವೃತ್ತಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತಿದೆ ಎಂದು ಸಂಘದ ರಾಜ್ಯಾಧ್ಯಕ್ಷೆ ವಿದ್ಯಾ ಥೊಬ್ಬಿ ತಿಳಿಸಿದ್ದಾರೆ.

# ವೃಕ್ಷತ್ಥಾನ್ ರನ್: ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಭಾಗಿ

ಉದಯರಶ್ಮಿ ನ್ಯೂಸ್




ವಿಜಯಪುರ: ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ನಾನಾ ಪದಕಗಳನ್ನು ಪಡೆದಿರುವ ಖ್ಯಾತನಾಮರು ನಗರದಲ್ಲಿ ಡಿಸೆಂಬರ್ 24 ರಂದು ನಡೆಯುವ ವೃಕ್ಷತ್ಥಾನ್ ಹೆರಿಟೇಜ್ ರನ್–2023ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಈ ಸಲ ದೇಶದ ನಾನಾ ಭಾಗಗಳಿಂದ ಕ್ರೀಡಾಪಟುಗಳಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಕರ್ನಾಟಕ ಮಾತ್ರವಲ್ಲ ದೇಶ, ವಿದೇಶಗಳಲ್ಲಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆದ ಮ್ಯಾರಾಥಾನ್ ಗಳಲ್ಲಿ ಪಾಲ್ಗೊಂಡ ಹೆಸರಾಂತ ಮ್ಯಾರಾಥಾನ್ ಪಟುಗಳು ಕೂಡ ಪಾಲ್ಗೊಳ್ಳುತ್ತಿದ್ದಾರೆ.




ಯವಕರು, ಮಧ್ಯ ವಯಸ್ಕರು, ಹಿರಿಯರು, ಹಿರಿಯ ಮಹಿಳೆಯರೂ ಆನಲೈನ್ ಮೂಲಕ ಹೆಸರು ನೋಂದಾಯಿಸಿ ಇತರರೂ ಪಾಲ್ಗೊಳ್ಳಲು ಸ್ಪೂರ್ತಿ ನೀಡಿದ್ದಾರೆ. 72 ವರ್ಷದ ಹಿರಿಯ ಮಹಿಳೆ, ಸಾಫ್ಟವೇರ್ ಎಂಜಿನಿಯರ್, ವೃತ್ತಿಪರ ಮ್ಯಾರಾಥಾನ್ ಓಟಗಾರರು ಸೇರಿದಂತೆ ಸಾವಿರಾರು ಜನರು ಈಗಾಗಲೇ ಹೆಸರು ನೋಂದಾಯಿಸಿದ್ದಾರೆ.

ವಿಜಯಪುರ ವೃಕ್ಷತ್ಥಾನ್ ಹೆರಿಟೇಜ್ ರನ್– 2023ರಲ್ಲಿ ಪಾಲ್ಗೊಳ್ಳಲಿರುವ ಖ್ಯಾತನಾಮರ ಪರಿಚಯ ಇಲ್ಲಿದೆ.

1.ಕಟಪಾಡಿ ಸುಲತಾ ಕಾಮತ

ಉಡುಪಿಯ ಕಾಪುವಿನ ಹಿರಿಯ 72 ವರ್ಷ ವಯಸ್ಸಿನ ಹಿರಿಯ ಮಹಿಳೆ ಕಟಪಾಡಿ ಸುಲತಾ ಕಾಮತ ಬರಿಗಾಲ ಓಟಗಾರ್ತಿ ಎಂದೇ ಖ್ಯಾತಿ ಪಡೆದಿದ್ದಾರೆ. ಬರಿಗಾಲಿನಲ್ಲಿ ಓಡುವ ಇವರು ಈಗಾಗಲೇ ದೇಶ ವಿದೇಶಗಳ ನಾನಾ ಮ್ಯಾರಾಥಾನ್ ಗಳಲ್ಲಿ ಪಾಲ್ಗೊಂಡು ಅನೇಕ ಪದಕ ಜಯಿಸಿದ್ದು, ವಿಜಯಪುರ ವೃಕ್ಷತ್ಥಾನ್ ಹೆರಿಟೇಜ್ ರನ್–2023ರಲ್ಲಿ ಪಾಲ್ಗೊಳ್ಳಲು ತಮ್ಮ ಹೆಸರು ನೋಂದಾಯಿಸಿದ್ದಾರೆ.

2.ಪ್ರಶಾಂತ ಹಿಪ್ಪರಗಿ

ಪ್ರಶಾಂತ ಹಿಪ್ಪರಗಿ ಟ್ರಯಥ–ಲಾನ್ ಪಟುವಾಗಿದ್ದು, ಬ್ರಾಝಿಲ್ ನಲ್ಲಿ ನಡೆಯಲಿರುವ ಡಿಇಸಿಎ ಐರಾನಮನ್ 2023 ರನ್ ನಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆದಿರುವ ಭಾರತದ ಏಕೈಕ ಓಟಗಾರರಾಗಿದ್ದಾರೆ. ಟ್ರಯಥ್ಲಾನ್ ಪಟುವಾಗಿರುವ ಅವರು ಈ ಬ್ರಾಝಿಲ್ ಡೆಕಾ ಐರಾನಮನ್ ನ ಮೂರು ಬಗೆಯ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇವರು 11 ದಿನಗಳಲ್ಲಿ 38 ಕಿ. ಮೀ. ಈಜು, 1800 ಕಿ. ಮೀ. ಸೈಕ್ಲಿಂಗ್ ಮತ್ತು 422 ಕಿ. ಮಿ. ಓಟವನ್ನು ಪೂರ್ಣಗೊಳಿಸುವ ಮೂಲಕ ಅವರು ಈಗಾಗಲೇ 19 ದಿನಗಳಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ ಸೈಕ್ಲಿಂಗ್ ನ್ನು ಪೂರ್ಣಗೊಳಿಸಿದ್ದಾರೆ. ಇನ್ನುಳಿದ ಸ್ಪರ್ದೆಗಾಗಿ ಅವರು ಬ್ರೆಝಿಲ್ ಗೆ ತೆರಳುತ್ತಿದ್ದು, ಡಿಸೆಂಬರ್ 24 ರಂದು ವಿಜಯಪುರಕ್ಕೆ ಆಗಮಿಸಿ ವೃಕ್ಷತ್ಥಾನ್ ಹೆರಿಟೇಜ್ ರನ್ ನಲ್ಲಿ ಪಾಲ್ಗೊಳ್ಳಲಿದ್ದಾರೆ.

3.ಪ್ರೇರಣಾ ಶ್ರವಣ ಕುಮಾರ

16 ವರ್ಷದ ಪ್ರೇರಣಾ ಅಂತಾರಾಷ್ಟ್ರೀಯ ಟ್ರಯಥ್ಲೀಟ್ ಆಗಿದ್ದು, 2022ರಲ್ಲಿ ಹಾಂಗಕಾಂಗ್ ನಲ್ಲಿ ನಡೆದ ಏಷಿಯಾ ಯುಥ್ ಟ್ರೈಯಥ್ಲಾನ್ ಚಾಂಪಿಯನಶಿಪ್ ನಲ್ಲಿ ಕಂಚಿನ ಪದಕ ಪಡೆದಿದ್ದಾರೆ. ಗುಜರಾತಿನಲ್ಲಿ 2022ರಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಟದಲ್ಲಿ ಟ್ರಯಥ್ಲಾನ್ ನಲ್ಲಿ ಪಾಲ್ಗೊಂಡಿದ್ದಾರೆ. ರಾಷ್ಟ್ರೀಯ ಸೈಕ್ಲಿಂಗ್, 3 ಕಿ. ಮೀ, 5 ಕಿ. ಮೀ, 10 ಕಿ. ಮೀ ಓಟದಲ್ಲಿ ಪಾಲ್ಗೊಂಡು ಹೆಸರು ಮಾಡಿದ್ದಾರೆ.

4.ರಾಜಿಂದರ ಕೌರ

53 ವರ್ಷದ ರಾಜಿಂದರ ಕೌರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಮತ್ತು ಅಲ್ಟ್ರಾ ಮ್ಯಾರಾಥಾನ್ ನಲ್ಲಿ ಬೆಳ್ಳಿಯ ಪದಕ ಪಡೆದ ಸಾಧಕಿಯಾಗಿದ್ದಾರೆ. ಯುಎಸ್ ನ ಕ್ಲೆವಲ್ಯಾಂಡ್ ನಲ್ಲಿ ನಡೆದ ಟ್ರಯಥ್ಲಾನ್ ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

5.ಶೋಭಾ ನರೇಂದ್ರ ಕುಮಾರ ನಾಗಶೆಟ್ಟಿ

ಸಿ.ಆರ್.ಡಿ.ಎಸ್. ಫೌಂಡೇಶನ್ ಸಂಸ್ಥಾಪಕರು ಹಾಗೂ ನಿರ್ದೇಶಕರಾಗಿರುವ ಶೋಭಾ ಮತ್ತು ನರೇಂದ್ರಕುಮಾರ ನಾಗಶೆಟ್ಟಿ ಅವರೂ ಕೂಡ ಈ ಮ್ಯಾರಾಥಾನ್ ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇವರು, ಕಳೆದ 25 ವರ್ಷಗಳಿಂದ ಮ್ಯಾರಾಥಾನ್, ಅಲ್ಟ್ರಾ ಮ್ಯಾರಾಥಾನ್ ಸೇರಿದಂತೆ ನಾನಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ, ತಮ್ಮ ಫೌಂಡೇಶನ್ ಮೂಲಕ ಕರ್ನಾಟಕದ ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಮತ್ತು ಜಾಗೃತಿ ಮೂಡಿಸುವ ಕಾಯಕದಲ್ಲಿ ನಿರತರಾಗಿದ್ದಾರೆ.

6.ವೆಂಟಕೇಶ ಅಡಿಗ*

ವೃತ್ತಿಯಂದ ಎಂಜಿನಿಯರ್ ಆಗಿರುವ ವೆಂಕಟೇಶ ಅಡಿಗ ಫಿಟ್ನೆಸ್ ಗೆ ಹೆಚ್ಚಿನ ಒತ್ತು ನೀಡುತ್ತಿರುವ ಮ್ಯಾರಾಥಾನ್ ಓಟಗಾರರಾಗಿದ್ದು, 5 ಕಿ. ಮೀ. ಯಿಂದ 50 ಕಿ. ಮೀ. ವರಗೆ ದೇಶಾದ್ಯಂತ ನಡೆದ ನಾನಾ ಮ್ಯಾರಾಥಾನ್ ಗಳಲ್ಲಿ ಪಾಲ್ಗೊಂಡು ಹೆಸರು ಮಾಡಿದ್ದಾರೆ. ಬೋಸ್ಟನ್ ನಲ್ಲಿ ನಡೆದ 3ಥ ಮ್ಯಾರಾಥಾನ್ ಗೆ ಅರ್ಹತೆ ಪಡೆದಿರುವ ಅವರು, ಸ್ಪೋರ್ಟ್ಸ್ ಕೌನ್ಸಿಲ್ ಪ್ರಾರಂಭಿಸಿ ಓಟಗಾರರಿಗೆ ತರಬೇತಿ ನೀಡುತ್ತಿದ್ದಾರೆ. ಅವರೂ ಕೂಡ ಹೆಸರು ನೋಂದಾಯಿಸಿದ್ದು, ಈ ಬಾರಿ ವಿಜಯಪುರ ಮ್ಯಾರಾಥಾನ್ ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

7.ಸಮೀರ ಜೋಶಿ

ಅಲ್ಟ್ರಾ ಮ್ಯಾರಾಥಾನ್ ಓಟಗಾರ ಸಮೀರ ಜೋಶಿ ಕೂಡ ವಿಜಯಪುರ ವೃಕ್ಷತ್ಥಾನ್ ಹೆರಿಟೇಜ್ ರನ್–2023ರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಬರ್ಲಿನ್ ಮತ್ತು ಚಿಕ್ಯಾಗೋದಲ್ಲಿ ನಡೆದ 2ನೇ ಹಿರಿಯರ ಮ್ಯಾರಾಥಾನ್ ನಲ್ಲಿ ಪಾಲ್ಗೊಂಡು ಗಮನ ಸೆಳೆದಿದ್ದಾರೆ. 2014ರಲ್ಲಿ ಮ್ಯಾರಾಥಾನ್ ಮತ್ತು ಅಲ್ಟ್ರಾ ಮ್ಯಾರಾಥಾನ್, 2020ರಲ್ಲಿ ದೆಹಲಿ ಮ್ಯಾರಾಥಾನ್, ಇದೇ ವರ್ಷ ಬೆಂಗಳೂರಿನಲ್ಲಿ ನಡೆದ 50 ಕಿ. ಮೀ. ಅಲ್ಟ್ರಾ ಮ್ಯಾರಾಥಾನ್ ನಲ್ಲಿ ಪಾಲ್ಗೊಂಡಿರುವ ಅವರು, ನಾನಾ ವಯೋಮಾನಗಳ ವಿಭಾಗದಲ್ಲಿ 10 ಕಿ. ಮೀ. ಮ್ಯಾರಾಥಾನ್ ನಲ್ಲಿಯೂ ಪಾಲ್ಗೊಂಡು ಗಮನ ಸೆಳೆದಿದ್ದಾರೆ. ಇವರು ಕ್ರೀಡಾ ವಿಭಾಗದ ನಾನಾ ಸಂಸ್ಥೆಗಳಿಂದ ಮಾನ್ಯತೆ ಪಡೆದ ಕೋಚ್ ಕೂಡ ಆಗಿದ್ದಾರೆ.

8.ಅನಂತರಾಮ

ಬೆಂಗಳೂರಿನ ಬಿ.ಎ□□□ ನಲ್ಲಿ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿರುವ 64 ವರ್ಷದ ಅನಂತರಾಮ ಕೂಡ ಈ ಓಟದಲ್ಲಿ ಪಾಲ್ಗೊಳ್ಳುತ್ತಿರುವುದು ಗಮನಾರ್ಹವಾಗಿದೆ. ಅನಂತ ಮ್ಯಾರಾಥಾನ್ ಓಟಗಾರರಾಗಿದ್ದು, ಸಿಟಿ ಆಫ್ ಮ್ಯಾರಾಥಾನ್ ಖ್ಯಾತಿಯ ಅಥೆನ್ಸ್ ನಲ್ಲಿಯೂ ಮ್ಯಾರಾಥಾನ್ ನಲ್ಲಿ ಪಾಲ್ಗೊಂಡು ಹೆಸರು ಮಾಡಿದ್ದಾರೆ. 10 ಕಿ. ಮೀ., 54.1 ಕಿ. ಮೀ., 21 ಕಿ. ಮೀ. ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ, ಇತ್ತೀಚೆಗೆ ನಡೆದ ಲಢಾಕ್ ಮ್ಯಾರಾಥನ್ ನಲ್ಲಿ ಭಾಗವಹಿಸಿದ್ದಾರೆ.




9.ಹರಿನಾಥ

ಬೆಂಗಳೂರಿನ ರನ್ನಿಂಗ್ ಕ್ಲಬ್ ರಾಯಭಾರಿಯಾಗಿರುವ ಹರಿನಾಥ ಕೂಡ ವೃಕ್ಷತ್ಥಾನ್ ಹೆರಿಟೇಜ್ ರನ್–2023ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ದೇಶಾದ್ಯಂತ ನಾನಾ ಭಾಗಗಳಲ್ಲಿ ನಡೆದ ಮ್ಯಾರಾಥಾನ್, ಅಲ್ಟ್ರಾ ಮ್ಯಾರಾಥಾನ್ ಗಳನ್ನು ಓಟಗಾರ ಎಂದೇ ಹೆಸರು ಪಡೆದಿದ್ದಾರೆ. ಕಳೆದ ಡಿಸೆಂಬರ್ 9 ಮತ್ತು 9 ರಂದು ಬೆಂಗಳೂರಿನಿಂದ ಶ್ರವಣ ಬೆಳಗೋಳವರೆಗೆ ಸುಮಾರು 150 ಕಿ. ಮೀ. ಓಡಿ ಗಮನ ಸೆಳೆದಿದ್ದಾರೆ.

ಇವರಷ್ಟೇ ಅಲ್ಲ, ಇನ್ನೂ ಅನೇಕ ಹೆಸರಾಂತ ಓಟಗಾರರು ಪಾಲ್ಗೊಳ್ಳುತ್ತಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಆನಲೈನ್ ಮೂಲಕ ಣಣಣಿ:// ಡಿಜರ.ಟಥಿಡಿಚಿಛಿಜುಟಿಜುಚಿ.ಛಿಂಟ/ ಒಖಖಿಖ/ಗಿಉೂಖ2023 ತಮ್ಮ ಹೆಸರುಗಳನ್ನು ಡಿಸೆಂಬರ್ 13ರ ರೊಳಗೆ ನೋಂದಾಯಿಸಬಹುದಾಗಿದೆ.

## ನೋಂದಣಿಗೆ ಇಂದು ಕೊನೆಯ ದಿನ

ವಿಜಯಪುರ: ಡಿ.24 ರಂದು ನಗರದಲ್ಲಿ ನಡೆಯಲಿರುವ ವಿಜಯಪುರ ವೃಕ್ಷತ್ಥಾನ ಹೆರಿಟೇಜ್‌ರನ್– 2023 ಗೆ ಇವರೆಗೆ ಸುಮಾರು 6000 ಜನ ಆನಲೈನ್ ಮೂಲಕ ಹೆಸರು ನೋಂದಾಯಿಸಿ ಕೊಂಡಿದ್ದು, ಡಿಸೆಂಬರ್ 13 ನೋಂದಣಿ ಮಾಡಲು ಕೊನೆಯ ದಿನವಾಗಿದೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ನೋಂದಣಿ ಸಮಿತಿಯ ಡಾ. ಮಲ್ಲಿಕಾರ್ಜುನ ಯಲಗೊಂಡ ಮತ್ತು ವೀರೇಂದ್ರ ಗುಚ್ಚೆಟ್ಟಿ, ಈ ಓಟದಲ್ಲಿ ಪಾಲ್ಗೊಳ್ಳಲು ಈಗಾಗಲೇ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಖ್ಯಾತಿಯ ಕ್ರೀಡಾಪಟುಗಳು, 72 ವರ್ಷದ ಹಿರಿಯ ಮಹಿಳೆ ಸೇರಿದಂತೆ ಮಕ್ಕಳು ಹಾಗೂ ಯುವಕರು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದಾರೆ. ಡಿಸೆಂಬರ್ 13 ನೋಂದಾವಣಿಗೆ ಕೊನೆಯ ದಿನವಾಗಿದ್ದು, ಕ್ರೀಡಾಸಕ್ತರು ಕೂಡಲೇ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಈ ಮೂಲಕ ಪರಿಸರ ಮತ್ತು ಪ್ರಾಚೀನ ಸ್ಮಾರಕಗಳ ಸಂರಕ್ಷಣೆ ಮತ್ತುಜಾಗೃತಿ ಮೂಡಿಸಲು ಹಾಗೂ ಶತಮಾನದ ಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಗೌರವಾರ್ಥ ಆಯೋಜಿಸಲಾಗಿರುವ ವಿಜಯಪುರ ವೃಕ್ಷತ್ಥಾನ ಹೆರಿಟೇಜ್‌ರನ್– 2023 ಭಾಗಿಯಾಗಬೇಕು.

ಆಸಕ್ತರು ಆನಲೈನ್ ಮೂಲಕ ಣಣಣಿ://ಡಿಜರ.ಟಥಿಡಿಚಿಛಿಜುಟಿ–ಜುಚಿ.ಛಿಂಟ/ಒಖಖಿಖ/ಗಿಉೂಖ2023 ಹೆಸರು ನೋಂದಾಯಿಸಬೇಕು ಎಂದು ಡಾ. ಮಲ್ಲಿಕಾರ್ಜುನ ಯಲಗೊಂಡ ಮತ್ತು ವೀರೇಂದ್ರ ಗುಚ್ಚೆಟ್ಟಿ ಮನವಿ ಮಾಡಿದ್ದಾರೆ.

# ಸಂಸ್ಕೃತ ಸರಳ–ಸ್ವಚ್ಛಂದ, ಅರ್ಥಗರ್ಭಿತ ಭಾಷೆ

ಉದಯರಶ್ಮಿ ನ್ಯೂಸ್



ಸಿಂದಗಿ: ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಂಸ್ಕೃತಭಾಷೆ ಪರಿಚಯವಾಗಬೇಕು. ಸಂಸ್ಕೃತದ ಬಗ್ಗೆ ಆಸಕ್ತಿ ಮೂಡಬೇಕು. ಇದು ನಮ್ಮ ದೇಶದ ಭಾಷೆ ಎಂದು ಸಿಂದಗಿಯ ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ ಸಹ ನಿರ್ದೇಶಕ ಅಶೋಕ ವಾರದ ಹೇಳಿದರು.

ಪಟ್ಟಣದ ಶ್ರೀ ಸಾತವಿರೇಶ್ವರ ಸಭಾಭವನದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಮತ್ತು ಶ್ರೀ ಪದ್ಮರಾಜ ಸಂಸ್ಕೃತ ವೇದ ಪಾಠಶಾಲೆ ಇವುಗಳ ಸಹಯೋಗದಲ್ಲಿ ಡಿ.5–ಡಿ.14ರವರೆಗೆ ಆಯೋಜಿಸಿರುವ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಹಮ್ಮಿಕೊಂಡಿರುವ ಪುನಶ್ಚೇತನ ಶಿಬಿರದ ಅಂಗವಾಗಿ ಸಂಸ್ಕೃತ ಭಾಷೆಯ ಅಭಿವೃದ್ಧಿ ಹಾಗೂ ಪ್ರಚಾರದ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ವೇಳೆ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಸಹಾಯಕ ನಿರ್ದೇಶಕರು ಡಾ. ಮಲ್ಲನಗೌಡ ಎಸ್. ಮಾತನಾಡಿ, ಸಂಸ್ಕೃತ ಭಾಷೆಯ ಬಳಕೆಯಿಂದ ನಮ್ಮ ಮನಸ್ಸು ಪ್ರಫುಲ್ಲವಾಗುತ್ತದೆ. ಸಂಸ್ಕಾರ ಬರುತ್ತದೆ. ಇಂದಿನ ದಿನಮಾನಗಳಲ್ಲಿ ನಮ್ಮ ಭಾರತೀಯ ಸಂಸ್ಕೃತಿಯನ್ನು ಮರೆತು ಪಾಶ್ಚಾತ್ಯ ಸಂಸ್ಕೃತಿ ಕಡೆಗೆ ಯುವ ಜನಾಂಗ ಗಮನ ಹರಿಸುತ್ತಿದೆ, ಆದರೆ ವಿದೇಶಿಯರು ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಇದೆಲ್ಲವಕ್ಕೂ ನಮ್ಮ ಹಿಂದಿನ ಪರಂಪರೆಯೇ ಕಾರಣವಾಗಿದೆ. ಸಂಸ್ಕೃತವನ್ನು ಕಲಿತು ಸಂಸ್ಕೃತದಲ್ಲಿಯೇ ಮಾತನಾಡುವುದರ ಮೂಲಕ ಪೋಷಣೆ ಮಾಡೋಣ ಎಂದರು.

ಇದೇ ಸಂದರ್ಭದಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಯೋಜನ ಸಹಾಯಕರು ವಾಲ್ಮಿಕಿರಾವ್ ಮಾತನಾಡಿ, ದೇವನಗರಿ ಲಿಪಿಯನ್ನು ಸಂಸ್ಕೃತ ಭಾಷೆಯಲ್ಲಿ ಬಳಸಲಾಗಿದೆ. ಸಂಸ್ಕೃತ ದೇವನಗರಿ ಲಿಪಿ. ಆದ್ದರಿಂದ ನಾವು ಸಂಸ್ಕೃತವನ್ನು ಮಾತನಾಡಿದರೆ ದೇವರಿಗೆ ಸಮಾನರು ಎಂಬ ಹೆಗ್ಗಳಿಕೆ ಇದೆ. ಸಂಸ್ಕೃತ ಭಾಷೆ ಅತ್ಯಂತ ಕಠಿಣ ಭಾಷೆ ಎಂದು ಪೋಷಕರು ಸಂಸ್ಕೃತ ಭಾಷೆಯಿಂದ ಮಕ್ಕಳನ್ನು ದೂರ ಇಡುತ್ತಿದ್ದಾರೆ. ಆದರೆ ವಾಸ್ತವವಾಗಿ ಸಂಸ್ಕೃತ ಕಠಿಣ ಭಾಷೆಯಲ್ಲ, ಸರಳ, ಸ್ವಚ್ಛಂದ ಮತ್ತು ಅರ್ಥಗರ್ಭಿತ ಭಾಷೆಯಾಗಿದೆ ಎಂದರು.

ಸಂಸ್ಕೃತ ಭಾಷಾ ಅಭಿವೃದ್ಧಿ ಮತ್ತು ಪ್ರಚಾರದ ಜಾಥಾವು ಶ್ರೀ ಸಾತವೀರೇಶ್ವರ ಸಭಾಭವನದಿಂದ ಟಿಪ್ಪು ಸುಲ್ತಾನ ವೃತ್ತಕ್ಕೆ ಸಾಗಿ ಅಲ್ಲಿಂದ ಡಾ.ತೋಂಟದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ರಸ್ತೆ ಮಾರ್ಗವಾಗಿ ಸಾಗಿ ಶ್ರೀ ಸ್ವಾಮಿ ವಿವೇಕಾನಂದ ವೃತ್ತದ ಮಾರ್ಗವಾಗಿ ಸಾರಂಗಮಠ ತಲುಪಿತು.

ಜಾಥಾದಲ್ಲಿ ಮಲ್ಲಣ್ಣ, ಜಗದೀಶ ಕರೆಪ್ಪನವರ, ಬಿ.ಬಿ.ರೈರ್, ಚನ್ನಬಸವರಾಜ ಕತ್ತಿ, ವಿರೇಶ ಸ್ತಾವರಮಠ ಮತ್ತು ಬೆಳಗಾವಿ ಧಾರವಾಡ, ಮೈಸೂರ ವಲಯಗಳ ಸುಮಾರು 15 ಜಿಲ್ಲೆಗಳ ಅನುದಾನಿತ ಮತ್ತು ಅನುದಾನರಹಿತ ಸಂಸ್ಕೃತ ಪಾಠಶಾಲೆಯ ಸುಮಾರು 250 ಕ್ಕೂ ಶಿಕ್ಷಕರು ಭಾಗವಹಿಸಿದ್ದರು.

# ಹಂದಿಗಳ ಹಾವಳಿಯಿಂದ ಸಾಂಕ್ರಾಮಿಕ ರೋಗ :ಚೌಕಿಮಠ

ಉದಯರಶ್ಮಿ ನ್ಯೂಸ್



ಸಿಂದಗಿ: ಹಂದಿಗಳ ಹಾವಳಿಯಿಂದ ಸಾರ್ವಜನಿಕರು ಹಲವಾರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ ಎಂದು ಪುರಸಭೆ ಮುಖ್ಯಾಧಿಕಾರಿ ಗುರುರಾಜ ಚೌಕಿಮಠ ಹೇಳಿದರು.

ಮಂಗಳವಾರದಂದು ಪಟ್ಟಣದ ಪುರಸಭೆ ಕಛೇರಿಯಲ್ಲಿ ಹಮ್ಮಿಕೊಂಡ ಹಂದಿ ಸಾಕಾಣಿಕೆ ಮಾಲೀಕರ ಸಭೆಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಹಂದಿಗಳ ಹಾವಳಿ ಹೆಚ್ಚಾಗಿದೆ. ಅದರಿಂದ ಸಾರ್ವಜನಿಕರಿಗೆ ಆರೋಗ್ಯ ಸಮಸ್ಯೆ ಉಂಟಾಗುತ್ತಿದ್ದು, ಕಾರಣ ಈ ಕೂಡಲೇ ಎಲ್ಲಾ ಹಂದಿಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ಹಂದಿ ಮಾಲಿಕರಿಗೆ ಸೂಚಿಸಿದರು.

ಈ ವೇಳೆ ತಾಲೂಕು ಪಶು ವೈದ್ಯಾಧಿಕಾರಿ ಮಾರುತಿ ತಡಲಗಿ ಮಾತನಾಡಿ, ರೋಗ ಹರಡದಂತೆ ವ್ಯಾಕ್ಸಿನೇಷನ್ ವ್ಯವಸ್ಥೆ ಇದ್ದು ಅದರ ಸದುಪಯೋಗ ಪಡಿಸಿಕೊಳ್ಳಲು ಸೂಚಿಸಿದರು.

ಇದೇ ಸಂದರ್ಭದಲ್ಲಿ ರಾಮು ಮೋರಟಗಿ ಮಾತನಾಡಿ, ಪುರಸಭೆ ಕಾರ್ಯಾಲಯದಲ್ಲಿ ಹಂದಿ ಹಿಡಿಯುವ ಸಲುವಾಗಿ ಸಿಬ್ಬಂದಿಗಳನ್ನು ಗುತ್ತಿಗೆ ಆದಾರದ ಮೇಲೆ ನೇಮಿಸಿಕೊಳ್ಳಬೇಕು ಎಂದರು.

ಈ ವೇಳೆ ಅದಕ್ಕೆ ಉತ್ತರಿಸಿ ಮುಖ್ಯಾಧಿಕಾರಿಗಳು ಕ್ರಮ ವಹಿಸುವುದಾಗಿ ಸೂಚಿಸಿದರು.

ಈ ಸಭೆಯಲ್ಲಿ ಕಿರಿಯ ಆರೋಗ್ಯ ನಿರೀಕ್ಷಕಿ ಇಂದುಮತಿ ಮಣೂರ, ಸಿದ್ದು ಅಂಗಡಿ ಸೇರಿದಂತೆ ಹಂದಿ ಸಾಕಾಣಿಕೆ ಮಾಲೀಕರು, ಪುರಸಭೆ ಸಿಬ್ಬಂದಿಗಳು ಇದ್ದರು.

# ಕನಕ ಯುವ ಸೇನೆ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಆಯ್ಕೆ

ಉದಯರಶ್ಮಿ ನ್ಯೂಸ್



ಬ್ರಹ್ಮದೇವನಮಡು: ಸಿಂದಗಿ ತಾಲೂಕಿನ ಯಂಕಂಚಿ ಗ್ರಾಮದಲ್ಲಿ ನಡೆದ ಹಾಲುಮತ ಸಮಾಜದ ಮುಖಂಡರ ಸಮ್ಮುಖದಲ್ಲಿ ಕನಕ ಯುವ ಸೇನೆಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಮಲ್ಲಿಕಾಜು9ನ ಪೂಜಾರಿ ಹಾಗೂ ಉಪಾಧ್ಯಕ್ಷರಾಗಿ ಮಾಳಿಂಗರಾಯ ನಂದಗೀರಿ ಆಯ್ಕೆಯಾದರು.

ಈ ವೇಳೆ ಸಮಾಜದ ಮುಖಂಡರಾದ ಕಲ್ಲಪ್ಪ ಬಿಸನಾಳ, ಜಗದೀಶ್ ಹೂನಳ್ಳಿ, ನಾಗಣ್ಣ ಮುಜಾವರ, ಶರಣಪ್ಪ ತಳಗೇರಿ, ಸಿದ್ದರಾಮ ಹಳ್ಳಿ, ಯಮನೂರ ಸುಂಬಡ, ಪೂಜಾರಿ, ಬೀರಣ್ಣ ಬಿಸನಾಳ,

ರಮೇಶ ತಳಗೇರಿ, ಬಸವರಾಜ್ ಮೋರಟಗಿ ,ಕರೆಪ್ಪ ತಳಗೆರಿ, ಬೀರಣ್ಣ ಮಾಸ್ತರ, ಬೀರಪ್ಪ ಪೂಜಾರಿ ಸೇರಿದಂತೆ ಸಮಾಜದ ಬಂಧುಗಳು ಇದ್ದರು.

### ಸಮಗ್ರ ಇಂಡಿ ಕ್ಷೇಮಾಭಿವೃದ್ಧಿ ಸಂಘ, ಇಂಡಿ ಜಿಲ್ಲಾ ಹೋರಾಟ ಸಮಿತಿ ಮತ್ತು ಆರ್ಟಿಕಲ್ 371 ಜೆ ಹಕ್ಕು ಒತ್ತಾಯ ಸಮಿತಿ ಪ್ರತಿಭಟನೆ

# ಇಂಡಿ ಜಿಲ್ಲಾ ಕೇಂದ್ರ ಮಾಡಲು ಆಗ್ರಹಿಸಿ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ಇಂಡಿ: ಇಂಡಿ ಪ್ರತ್ಯೇಕ ಜಿಲ್ಲೆ ಘೋಷಣೆಗೆ ಆಗ್ರಹಿಸಿ ಸಮಗ್ರ ಇಂಡಿ ಕ್ಷೇಮಾಭಿವೃದ್ಧಿ ಸಂಘ, ಇಂಡಿ ಜಿಲ್ಲಾ ಹೋರಾಟ ಸಮಿತಿ ಮತ್ತು ಆರ್ಟಿಕಲ್ 371 ಜೆ ಹಕ್ಕು ಒತ್ತಾಯ ಸಮಿತಿ ವತಿಯಿಂದ ಮಿನಿ ವಿಧಾನಸೌಧ ಎದುರು ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಸಮಗ್ರ ಇಂಡಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಂಜುನಾಥ ಕಾಮಗೊಂಡ ಮಾತನಾಡಿ, ಜಿಲ್ಲಾ ಕೇಂದ್ರಕ್ಕೆ ಯೋಗ್ಯವಾದ ಭೌಗೋಳಿಕ ಪ್ರದೇಶ ಮತ್ತು ಸರಕಾರಿ ಕಚೇರಿಗಳನ್ನು ಹೊಂದಿರುವ ಇಂಡಿಯನ್ನು ಜಿಲ್ಲೆಯಾಗಿಸಬೇಕು. ಜಿಲ್ಲಾ ಕೇಂದ್ರಕ್ಕೆ ಯಾವುದೇ ತ್ಯಾಗಕ್ಕೂ ಸಿದ್ಧ ಎಂದರು.

ಪಾಪು ಕಿತ್ತಳಿ ಮಾತನಾಡಿ, ಸರಕಾರ ನಮ್ಮ ಮನವಿ ಪರಿಗಣಿಸಿ ಇಂಡಿ ಜಿಲ್ಲಾ ಕೇಂದ್ರ ಘೋಷಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಪವಾಸ ಸತ್ಯಾಗ್ರಹ ಸೇರಿದಂತೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಸತೀಶ ಕುಂಬಾರ ಮಾತನಾಡಿ, ಸದ್ಯ ಸರಕಾರದ ಆಡಳಿತ ಯಂತ್ರವೇ ಬೆಳಗಾವಿಯಲ್ಲಿದ್ದು ಅಭಿವೃದ್ಧಿ ದೃಷ್ಟಿಯಿಂದ ಇಂಡಿಗೆ ಪ್ರತ್ಯೇಕ ಜಿಲ್ಲೆ ಸ್ಥಾನಮಾನ ನೀಡಬೇಕು. ಈ ಭಾಗದ ಬಹುದಿನದ ಜಿಲ್ಲಾ ಬೇಡಿಕೆಗೆ ಸರಕಾರ ಸ್ಪಂದಿಸಬೇಕು ಎಂದರು.

ಜಿ.ವಿ.ಬಿರಾದಾರ ಮಾತನಾಡಿ, ಶಾಸಕ ಯಶವಂತರಾಯಗೌಡರಿಗೆ ಬೆಳಗಾವಿ ಸದನದಲ್ಲಿ ಧ್ವನಿ ಎತ್ತಲು ವಿನಂತಿಸಿಕೊಂಡಿದ್ದೇವೆ, ಶಾಸಕರು ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿ ಅಧಿವೇಶನದಲ್ಲಿ ಧ್ವನಿ ಎತ್ತುವದಾಗಿ ಭರವಸೆ ನೀಡಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಡಾ॥ ರಮೇಶ ಪೂಜಾರಿ,ಎ.ಸಿ.ಪಾಟೀಲ, ಜಗದೀಶ



ಕ್ಷತ್ರಿ, ಕಿರಣಕುಮಾರ ಜೋಶಿ, ಸತೀಶ ಕುಂಬಾರ, ಪುರಸಭೆ ಸದಸ್ಯ ಅಯೂಬ ಬಾಗವಾನ, ತಾ.ಪಂ ಮಾಜಿ ಅಧ್ಯಕ್ಷ ಶೇಖರ ನಾಯಕ, ಅವಿನಾಶ ಬಗಲಿ, ಚನ್ನು ದೇವರ, ಮಹೇಶ ಮೈದರಗಿ, ರುಕ್ಮುದ್ದೀನ ಪಟೇಲ, ಸಂತೋಷ ಪರಶೇನ್ನವರ, ಮೇಘು ರಾಠೋಡ, ಬಾಲಾಜಿ ರಜಪೂತ, ರಮೇಶ ಅಡಗಲ್ಲ, ಉದ್ದಿಮೆದಾರ ಅನಂತ ಜೈನ, ನಿವೃತ್ತ ಪ್ರಾಚಾರ್ಯ ಎ.ಎಸ್.ಗಾಣಿಗೇರ ಮತ್ತಿತರಿದ್ದರು.

ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ಇವರಿಗೆ ಮನವಿ ಸಲ್ಲಿಸಿದರು.

### ಗೋಲಗೇರಿ ವಿದ್ಯುತ್ ಶಾಖೆ ವ್ಯಾಪ್ತಿಯ ಹಳ್ಳಿಗಳಲ್ಲಿ ಕಾರ್ಯಾಚರಣೆ

## ವಿದ್ಯುತ್ ಕಳ್ಳತನ ಮಾಡಿದರೆ ಸೂಕ್ತ ಕ್ರಮ :ಹಂಚಿನಾಳ



ಉದಯರಶ್ಮಿ ನ್ಯೂಸ್

ಬ್ರಹ್ಮದೇವನಮಡು: ಈ ಭಾಗದಲ್ಲಿ ರಾತ್ರಿ ವೇಳೆ ನೇರವಾಗಿ ಎಲ್ ಟಿ ಲೈನ್ ಗೆ ಹುಕ್ಕು ಹಾಕುತ್ತಿರುವದು ಕಂಡು ಬರುತ್ತಿದೆ. ವಿದ್ಯುತ್ ಕಳ್ಳತನ ಮಾಡುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಶಾಖಾಧಿಕಾರಿ ದಯಾನಂದ ಹಂಚಿನಾಳ ಹೇಳಿದರು.

ಸಿಂದಗಿ ತಾಲೂಕಿನ ಗೋಲಗೇರಿ ಶಾಖೆಯ ವ್ಯಾಪ್ತಿಯ ವಂದಾಲ, ಢವಳಾರ, ಸಾಸಾಬಾಳ, ಸಾಸಾಬಾಳ ತಾಂಡಾ, ಡಂಬಳ, ಕರವಿನಾಳ, ಕದಾರಪೂರ, ಡಂಬಳ ತಾಂಡಾದಲ್ಲಿ ಸೋಮವಾರ ವಿದ್ಯುತ್ ಬಾಕಿ ವಸೂಲಿ ಹಾಗೂ ಅನಧಿಕೃತ ವಿದ್ಯುತ್ ಕಾರ್ಯಾಚರಣೆಯಲ್ಲಿ ಮಿಟರ್ ವೈಯರ್, ವಶಪಡಿಸಿಕೊಂಡು ಅವರು ಮಾತನಾಡಿದರು.

ವಿದ್ಯುತ್ ಕಳ್ಳತನ ಮಹಾ ಅಪರಾಧ ಎಂದು ಗ್ರಾಮಗಳಲ್ಲಿ ಡಂಗುರ ಸಾರುವ ಮೂಲಕ ಜಾಗೃತಿ ಮೂಡಿಸಿದರು.


ಅನಧಿಕೃತವಾಗಿ ಬಳಸುತ್ತಿರುವ ಮನೆಗಳ ಮೇಲೆ ದಾಳಿ ಮಾಡಿ ಮೋಟರ್, ಪಂಪಸೆಟ್ ವಿದ್ಯುತ್ ವೈಯರ್ ಗಳನ್ನು ವಶಪಡಿಸಿಕೊಂಡರು.

ವಿದ್ಯುತ್ ಕಾರ್ಯಾಚರಣೆಯಲ್ಲಿ ಮೆಲ್ವಿಚಾರಕ ಉಮೇಶ ಕನಾ9ಳ, ಲೈನಮನ್ ಫಾರುಕಪಟೇಲ ಪಾಟೀಲ, ಶ್ರೀಶೈಲ್ ಮಾಲಿಪಾಟೀಲ, ಹಣಮಂತ್ರಾಯಗೌಡ ಬಿರಾದಾರ, ಗ್ರಾಮ ವಿದ್ಯುತ್ ಪ್ರತಿನಿಧಿ ಮಲ್ಲಿಕಾಜು9ನ ಕೋಟಾರಗಸ್ತಿ, ದೇವಿಂದ್ರ ಬಿರಾದಾರ ಇದ್ದರು.

## ಕೊಲ್ಹಾರದಲ್ಲಿ ಎಲ್ಲ ಆಡಳಿತ ಕಚೇರಿಗಳ ಆರಂಭಕ್ಕೆ ಆಗ್ರಹ

ಉದಯರಶ್ಮಿ ನ್ಯೂಸ್

ಕೊಲ್ಹಾರ: ಸ್ಥಳೀಯ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಮಾಡಿ ಸುಮಾರು 10-12 ವರ್ಷಗಳೇ ಕಳೆದರೂ ಹೆಸರಿಗೆ ಮಾತ್ರ ತಾಲೂಕು ಕೇಂದ್ರವಾಗಿದ್ದು ಈ ತಾರತಮ್ಯವನ್ನು ಹೋಗಲಾಡಿಸಿ ಪರಿಪೂರ್ಣ ತಾಲೂಕು ಕಚೇರಿಗಳನ್ನು ಹೊಂದಿದ ಕೊಲ್ಹಾರ ತಾಲೂಕು ಕೇಂದ್ರವಾಗಲು ಸಚಿವರಾದ ಶಿವಾನಂದ ಎಸ್ ಪಾಟೀಲ ವಿಶೇಷ ಕಾಳಜಿವಹಿಸಬೇಕೆಂದು ಹಿರೇಮಠದ ಮುರುಘೇಂದ್ರ ಮಹಾಸ್ವಾಮೀಜಿ ಹಾಗೂ ಕೊಲ್ಹಾರ ತಾಲೂಕು ಹೋರಾಟ ಸಮೀತಿ ಅಧ್ಯಕ್ಷ ಈರಣಗೌಡ ಬ ಕೋಮಾರ ಆಗ್ರಹಿಸಿದರು.



ಈ ಕುರಿತು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮೂವತ್ತು ಹಳ್ಳಿಗಳನ್ನು ಹಂಚಿಕೆ ಮಾಡಿ ಜನಸಂಖ್ಯೆ ಆಧಾರದ ಮೇಲೆ ಕೊಲ್ಹಾರ ಪಟ್ಟಣವನ್ನು ಹೋರಾಟ ಸಮೀತಿಯವರ ನಿರಂತರ ಹೋರಾಟದ ಫಲವಾಗಿ ಹಿಂದಿನ ಸರಕಾರಗಳು ತಾಲೂಕು ಕೇಂದ್ರವನ್ನಾಗಿ ಘೋಷಣೆ ಮಾಡಿ ಆದೇಶ ಹೊರಡಿಸಿದ್ದವು ಅದರಂತೆ ಕೆಲವೇ ಕೆಲವು ತಾಲೂಕಾ ಆಡಳಿತದ ಇಲಾಖೆಗಳು ಕಾರ್ಯನಿರ್ವಹಿಸುತ್ತಿದ್ದು ರೈತರಿಗೆ ಸಾರ್ವಜನಿಕರಿಗೆ ಅವಶ್ಯಕವಾದ ತಾಲೂಕಾ ಆಡಳಿತದ ಕಚೇರಿಗಳು ಪೂರ್ಣಪ್ರಮಾಣದಲ್ಲಿ ಬರದೇ ಇರುವದರಿಂದ ಜನರು ಈಗಲು ಮೂಲ ತಾಲೂಕು ಕೇಂದ್ರಕ್ಕೆ ತೆರಳಬೇಕಾದ ಅನಿವಾರ್ಯತೆಯನ್ನು ತಪ್ಪಿಸಲು ಇದೇ ಕ್ಷೇತ್ರವನ್ನು ಪ್ರತಿನಿಧಿಸುವ ಜನಪ್ರತಿನಿಧಿ ಸಚಿವ ಶಿವಾನಂದ ಎಸ್ ಪಾಟೀಲರು ಮುಂದಾಗಬೇಕೆಂದರು.

ತಾಲೂಕಾ ಆಡಳಿತದ ಸರಕಾರಿ ಕಚೇರಿಗಳನ್ನು ಪ್ರಾರಂಭಿಸಲು ಮತ್ತು ಮೂಲ ಸೌಕರ್ಯಗಳನ್ನು ದೊರಕಿಸಿಕೊಳ್ಳಲು ಪುನರ್ವಸತಿ ಕೇಂದ್ರವಾದ ಕೊಲ್ಹಾರ ಪಟ್ಟಣದಲ್ಲಿ ಕಟ್ಟಡಗಳು ಮತ್ತು ಜಾಗದ ಕೊರತೆಯೇನು ಇಲ್ಲ ಆದರೂ ಕೂಡ ಮೀನಾಮೇಷ ಎಣಿಸುತ್ತಿರುವುದು ಇಲ್ಲಿನ ಜನರ ಆಶಾಭಾವನೆಗೆ ದ್ರೋಹಬಗೆದಂತಾಗುತ್ತದೆ. ಆದ್ದರಿಂದ ತಾಲೂಕಿಗೆ ಅವಶ್ಯಕವಾಗಿರುವ ಕಚೇರಿಗಳನ್ನು ಸಿಬ್ಬಂದಿ ಸಮೇತ ಪ್ರಾರಂಭಿಸಬೇಕು ಪಕ್ಕದ ಬಬಲೇಶ್ವರ ಮತಕ್ಷೇತ್ರವನ್ನು ಪ್ರತಿನಿಧಿಸುವ ಸಚಿವ ಎಂ.ಬಿ.ಪಾಟೀಲರು ಬಬಲೇಶ್ವರ, ತಿಕೋಟಾ ತಾಲೂಕಿಗೆ ಉಪ ನೋಂದಣಿ ಕಚೇರಿ ಮಂಜೂರಾಗಿದೆ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದು ಅವರಷ್ಟೇ ಪ್ರಭಾವಿಗಳಾದ ಶಿವಾನಂದ ಪಾಟೀಲರು ಪ್ರತಿನಿಧಿಸುವ ಬಸವನ ಬಾಗೇವಾಡಿ ಮತಕ್ಷೇತ್ರದ ಕೊಲ್ಹಾರ ಪಟ್ಟಣದಲ್ಲಿ ಉಪನೊಂದಣಿ ಕಚೇರಿ ಸೇರಿದಂತೆ ತಾಲೂಕು ಕಚೇರಿಗಳು ಪ್ರಾರಂಭವಾಗಲು ಆಮೆ ನಡಿಗೆಯತ್ತ ಸಾಗಿರುವದು ಏಕೆ ಎನ್ನುವದು ಜನರಲ್ಲಿ ಜಿಜ್ಞಾಸೆ ಮೂಡುತ್ತಿದೆ ಎಂದರು.

ಗ್ರೇಡ್-1 ತಹಶೀಲ್ದಾರ ಕಚೇರಿ ಸೇರಿದಂತೆ ಮೂಲ ತಾಲೂಕು ಕೇಂದ್ರದಿಂದ ಹೊಸದಾಗಿ ಪ್ರಾರಂಭವಾದ ತಾಲೂಕು ಕೇಂದ್ರದಲ್ಲಿ ತಾಲೂಕು ಆಡಳಿತದ ಎಲ್ಲ ಇಲಾಖೆಗಳ ಪ್ರಮುಖ ಹುದ್ದೆಗಳು ಹಾಗೂ ಸಿಬ್ಬಂದಿಯೊಂದಿಗೆ ಕಾರ್ಯ ನಿರ್ವಹಿಸಲು ಅಸಾಧ್ಯವಾಗಿರುವುದು ಜನರಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ. ಇದರ ಹಿಂದೆ ರಾಜಕೀಯ ಕೈವಾಡ ಇರಬಹುದು ಎನ್ನುವ ಶಂಕೆ ವ್ಯಕ್ತವಾಗುತ್ತಿದೆ ಆದ್ದರಿಂದ ಕೊಲ್ಹಾರ ತಾಲೂಕು ವ್ಯಾಪ್ತಿಯ ಹಾಗೂ ಪಟ್ಟಣ ಪಂಚಾಯತಿಯ ಜನಪ್ರತಿನಿಧಿಗಳು ನಾಗರಿಕರು ಮಹಿಳೆಯರು ಒಗ್ಗಟ್ಟಾಗಿ ಪರಿಪೂರ್ಣ ತಾಲುಕು ಕೇಂದ್ರವಾಗುವ ಕುರಿತು ಮನವರಿಕೆ ಮಾಡಿಕೊಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಂದಾಯ ಸಚಿವರನ್ನು ಮತ್ತು ನಮ್ಮ ಭಾಗದ ಶಾಸಕರಾದ ಸಚಿವ ಶಿವಾನಂದ ಪಾಟೀಲರನ್ನು ಭೇಟಿಯಾಗಲು ಸಿದ್ದರಾಗಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು.

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯವಾಗಲು ಕಿತ್ತೂರು ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜನಪ್ರತಿನಿಧಿಗಳು ಸಾರ್ವಜನಿಕರು ಮುಂದಾಗಬೇಕು ಎಂದು ಹೇಳಿದರು.

## ನೇತ್ರ ಉಚಿತ ತಪಾಸಣಾ ಶಿಬಿರಕ್ಕೆ ಚಾಲನೆ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಮಾತು ಬಾರದೇ, ಕಿವಿ ಕೇಳದೇ ಇದ್ದರೂ ಜೀವನ ಸಾಗಿಸಬಹುದು. ಆದರೆ ಕಣ್ಣು ಕಾಣದೇ ಜೀವನ ನಡೆಸುವುದು ಅತ್ಯಂತ ಕಠಿಣಕರವಾಗಿದೆ ಎಂದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಯ ತಜ್ಞ ಡಾ. ಪ್ರಭುಗೌಡ ಲಿಂಗದಳ್ಳಿ(ಚಬನೂರ) ಹೇಳಿದರು.

ಪಟ್ಟಣದಲ್ಲಿ ಭಾನುವಾರ ಕಲ್ಮೇಶ್ವರ ದೇವಸ್ಥಾನದ ಆವರಣದಲ್ಲಿ ಜರುಗಿದ ಉಚಿತ ನೇತ್ರ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜೀವನದಲ್ಲಿ ನಲವತ್ತು ವರ್ಷದ ನಂತರ ಬಿ.ಪಿ. ಸಕ್ಕರೆ ಕಾಯಿಲೆಯಂತೆ ಕಣ್ಣಿನ ಸಮಸ್ಯೆಯು ಗಮನಾರ್ಹವಾಗಿ ಕಂಡು ಬರುತ್ತಿದೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿ ದೃಷ್ಟಿದೋಷ ಈಗೀಗ ಸಾಮಾನ್ಯವಾಗಿದ್ದು, ಇದರ ನಿಯಂತ್ರಣಕ್ಕಾಗಿ ಉಚಿತ ನೇತ್ರ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ದೇವರಹಿಪ್ಪರಗಿ ಪಟ್ಟಣದ ಹಿರಿಯ ವೈದ್ಯ ಆರ್.ಆರ್.ನಾಯಿಕ್ ಹಾಗೂ



ತಾಲ್ಲೂಕು ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ಕೆ.ಕುದರಿ ಮಾತನಾಡಿ, ಅನುಗ್ರಹ ಕಣ್ಣಿನ ಆಸ್ಪತ್ರೆಯ ಡಾ.ಪ್ರಭುಗೌಡರು ಬಡವರ ಪಾಲಿಗೆ ಕಣ್ಣಾಗಿ ಜಿಲ್ಲೆಯ ವಿವಿಧೆಡೆ ನೇತ್ರ ತಪಾಸಣೆ, ಉಚಿತ ಶಸ್ತ್ರಚಿಕಿತ್ಸೆ ಕೈಗೊಂಡಿರುವುದು ಶ್ಲಾಘನೀಯ ಎಂದರು.

ಉದ್ಘಾಟನಾ ಕಾರ್ಯಕ್ರಮಕ್ಕೆ ಸ್ಥಳೀಯ ಮಠಗಳ ಶ್ರೀಗಳು ಸಾನಿಧ್ಯ ವಹಿಸಿದ್ದರು. ಹಿರಿಯರಾದ ಬಾಳಾಸಾಹೇಬಗೌಡ ಪಾಟೀಲ ಹಾಗೂ ವೈದ್ಯ ಅಮರ ಸಾಲಕ್ಕಿ ವೇದಿಕೆಯಲ್ಲಿದ್ದರು.

ಶಿಬಿರದಲ್ಲಿ ಪಿ.ಎಸ್.ಮಿಂಚನಾಳ, ಬಾಬುಗೌಡ ಪಾಟೀಲ, ಬಂಡೆಪ್ಪ ಬಿರಾದಾರ, ನಾಗಪ್ಪ ವಡ್ಡೋಡಗಿ, ಭೋಜಪ್ಪ ಅತನೂರ, ಆನಂದ ಜಡಿಮಠ, ಸೋಮು ಹಿರೇಮಠ, ವಿನೋದ ನಾಶಿಮಠ, ವೀರೇಶ ಕುದರಿ, ಅನುಗ್ರಹ ಕಣ್ಣಿನ ಆಸ್ಪತ್ರೆಯ ಡಾ.ನೂರಅಹ್ಮದ್, ಡಾ.ಸ್ವಾತಿ, ಡಾ.ಕಾರ್ತಿಕ, ಡಾ.ಸಮೀರಾ, ಸುನೀಲ. ಕೆ, ಅಜಯ ಸಾವಂತ್, ಸಂಗಮೇಶ ಪಾಟೀಲ, ಅಫ್ತಾಬ್, ವಿನಾಯಕ, ಅಕ್ಷಯ, ಪ್ರಶಾಂತ, ಬಾಪುರಾಯ, ಸುಪ್ರೀಯಾ, ಆಸ್ಕರ್ ಹಾಗೂ ಸಾರ್ವಜನಿಕರು ಇದ್ದರು.

### ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತ ಪಾಲಕರ ಸಭೆಯಲ್ಲಿ ಶಿಕ್ಷಕ ನಿಂಗರಾಜ್ ಬಾಬಾಪುರ ಅಭಿಮತ

## ಶಿಕ್ಷಣದೊಂದಿಗೆ ಸಂಸ್ಕಾರ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

ಉದಯರಶ್ಮಿ ನ್ಯೂಸ್

ಕಲಕೇರಿ: ವಿದ್ಯಾರ್ಥಿ ಜೀವನದಲ್ಲಿ ಪ್ರಮುಖ ಘಟ್ಟವಾದ ಪದವಿಪೂರ್ವ ಹಂತದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಮೈಗೂಡಿಸಿಕೊಂಡರೆ ಅದುವೇ ಜೀವನಕ್ಕೆ ಭೂಷಣವಾಗಿದ್ದು, ವಿನಯದಿಂದ ಕಲಿತ ವಿದ್ಯೆ ಅಮೃತಕ್ಕೆ ಸಮಾನವಾದರೆ, ಅಹಂಕಾರದಿಂದ ಕಲಿತ ವಿದ್ಯೆ ವಿಷಕ್ಕೆ ಸಮಾನವಾಗುತ್ತದೆ. ಇದನ್ನರಿತು ತಂದೆ-ತಾಯಿ ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ಪಡೆದಾಗ ಮಾತ್ರ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ ಎಂದು ಆದರ್ಶ ಪ್ರೌಢಶಾಲೆಯ ಶಿಕ್ಷಕ ನಿಂಗರಾಜ್ ಬಾಬಾಪುರ ಹೇಳಿದರು.




ಗ್ರಾಮದ ಎ.ಕೆ.ಸಿರಸಗಿ ಕಲಾ ಮತ್ತು ವಿಜ್ಞಾನ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಪರಿಶೀಲನೆಯ ಕುರಿತು ಹಮ್ಮಿಕೊಂಡ ಪಾಲಕರ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಉಪಪ್ರಾಚಾರ್ಯ ಶ್ರೀದೇವಿ ಹೂಲಿ ಅವರು ಮಾತನಾಡಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ನಿರ್ದೇಶನದಂತೆ ಪರೀಕ್ಷೆಗಳನ್ನು ವಿದ್ಯಾರ್ಥಿ ಸ್ನೇಹಿಯಾಗಿ ಮಾರ್ಪಡಿಸುವ ಸಂಬಂಧ ಹಲವು ಶೈಕ್ಷಣಿಕ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಂತೆ ವಾರ್ಷಿಕ ಪರೀಕ್ಷೆ 1, 2 ಮತ್ತು 3ನ್ನು ನಡೆಸಲಾಗುತ್ತಿದ್ದು, ಮೂರೂ ಪರೀಕ್ಷೆಗಳನ್ನು ಬರೆಯುವುದು ಕಡ್ಡಾಯವಲ್ಲ ಆದರೆ ವಾರ್ಷಿಕ ಪರೀಕ್ಷೆ 1 ನ್ನು ಬರೆಯುವುದು ಹೊಸಬರು ಮತ್ತು ಖಾಸಗಿ ಅಭ್ಯರ್ಥಿಗಳಿಗೆ ಕಡ್ಡಾಯವಾಗಿರುತ್ತದೆ. ಒಂದು ವೇಳೆ 1ನೇ ಪರೀಕ್ಷೆ ಬರೆಯದವರು 2 ಮತ್ತು 3ನೇ ಪರೀಕ್ಷೆ ಬರೆಯಲು ಅರ್ಹರಲ್ಲ. ಇಲ್ಲಿ ಪೂರಕ ಪರೀಕ್ಷೆ ಬದಲಿಗೆ ವಾರ್ಷಿಕ ಪರೀಕ್ಷೆ 1,2 ಮತ್ತು 3 ಎಂದು ಹೆಸರಿಸಿರುವುದರಿಂದ ವಿದ್ಯಾರ್ಥಿಯ ಒಟ್ಟಾರೆ ಕಾರ್ಯಕ್ಷಮತೆ ಮತ್ತು ಸಕಾರಾತ್ಮಕ ಮನೋಭಾವವನ್ನು ಉತ್ತೇಜಿಸಿದಂತಾಗುತ್ತದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾದ ಗ್ರಾಪಂ ಸದಸ್ಯರಾದ ನಬಿಲಾಲ ನಾಯ್ಕೋಡಿ, ಪಿಯು ಕಾಲೇಜಿನ ಪ್ರಾಚಾರ್ಯರಾದ ರೇಷ್ಮಾ ಮುಜಾವರ, ಉಪನ್ಯಾಸಕರಾದ ಹರೀಶ್ ಎಚ್, ಪದವಿ ಕಾಲೇಜಿನ ಉಪನ್ಯಾಸಕರಾದ ಆಬೀದ ಸಾಲೋಡಗಿ ಮಾತನಾಡಿದರು.

ಗ್ರಾಪ್ರಂ ಅಧ್ಯಕ್ಷ ರಾಜಅಹ್ಮದ ಸಿರಸಗಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಐಟಿಐ ಕಾಲೇಜಿನ ಪ್ರಾಚಾರ್ಯರಾದ ವ್ಹಿ.ಎಸ್. ಚಿಕ್ಕಮಠ, ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಎಚ್.ಎ.ಮೊಮಿನ್, ಹುಸೇನಪ್ಪ ಸರ್, ಸಯ್ಯದ ಮೂಸಾ, ಮಲ್ಲಿಕಾರ್ಜುನ ಸಜ್ಜನ, ರುಕ್ಸಾನಾ ಬೇಪಾರಿ, ರುಬಿಯಾ ಮನಗೂಳಿ, ಹುಸೇನಬಾಶಾ ಚಾಂದಕವಟೆ, ಸಂಗೀತಾ ಟೆಂಗಳಿ, ಪ್ರವೀಣ ಪಾಕಿ, ಸವಿತಾ ಇಂಗಳೇಶ್ವರ, ಮಹಾಂತೇಶ ಲಂಗೋಟಿ, ರಾಜಾಬಕ್ಷಾರ ನಾಯ್ಕೋಡಿ ಸೇರಿದಂತೆ ಇತರರು ಇದ್ದರು.

# ವೇತನ ಪಾವತಿಗೆ ಆಗ್ರಹಿಸಿ ಕಾರ್ಮಿಕರ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ಆಲಮಟ್ಟಿ: ಇಲ್ಲಿಯ ವಿವಿಧ ಉದ್ಯಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರಣ್ಯ



ದಿನಗೂಲಿ ಕಾರ್ಮಿಕರಿಗೆ ಆರು ತಿಂಗಳಿಂದ ವೇತನ ಪಾವತಿ ಮಾಡದಿರುವುದನ್ನು ಖಂಡಿಸಿ ಅರಣ್ಯ ದಿನಗೂಲಿಗಳು ಮಂಗಳವಾರ ಇಲ್ಲಿ ಪ್ರತಿಭಟಿಸಿದರು.

ರಾಕ್ ಉದ್ಯಾನದಿಂದ ಮುಖ್ಯ ಎಂಜಿನಿಯರ್ ಕಚೇರಿಯವರೆಗೆ 100 ಕ್ಕೂ ಹೆಚ್ಚು ಕಾರ್ಮಿಕರು ಮೆರವಣಿಗೆ ನಡೆಸಿ ವೇತನ ವಿಳಂಬ ಧೋರಣೆ ಖಂಡಿಸಿದರು.

ಮುಖ್ಯ ಎಂಜಿನಿಯರ್ ಕಚೇರಿ ಎದುರು ಸಂಜೆಯವರೆಗೂ ಪ್ರತಿಭಟನೆ ನಡೆಸಿದ ನೂರಾರು ಕಾರ್ಮಿಕರು ಕಳೆದ ಆರು ತಿಂಗಳಿಂದ ವೇತನ ನೀಡಿಲ್ಲ, ಇದರಿಂದ ನಮ್ಮ ನಿತ್ಯ ಜೀವನದ ಸಾಗಿಸುವುದು ದುಸ್ತರವಾಗಿದೆ ಎಂದು ನೊಂದು ನುಡಿದರು.

ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಮಧ್ಯಾಹ್ನದವರೆಗೂ ಕುಳಿತರೂ ಯಾರೊಬ್ಬರೂ ಅವರ ಸಮಸ್ಯೆಯನ್ನೂ ಆಲಿಸುವವರೂ ಯಾರೂ ಇರಲಿಲ್ಲ.

ಧರಣಿನಿರತ ಪ್ರತಿಭಟನಾಕಾರರ ಸಮಸ್ಯೆ ಯಾರೊಬ್ಬ ಅಧಿಕಾರಿಯೂ ಆಲಿಸಿಲ್ಲ ಎಂಬುದನ್ನು ಗಮನಿಸಿ, ಪತ್ರಕರ್ತರ ಒತ್ತಡಕ್ಕೆ ಮುಖ್ಯ ಎಂಜಿನಿಯರ್ ಎಚ್.ಸಿ. ಶ್ರೀನಿವಾಸ ಹಾಗೂ ಪ್ರಧಾನ ಮುಖ್ಯ ಲೆಕ್ಕಾಧಿಕಾರಿ ವರದರಾಜು ಒಂದು ವಾರದೊಳಗೆ ವೇತನ ಬಿಡುಗಡೆಗೆ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಧರಣಿಯಲ್ಲಿ ಎಐಯುಟಿಯುಸಿ ಸಂಘಟನೆಯ ಜಿಲ್ಲಾ ಮುಖಂಡ ಎಚ್.ಟಿ. ಮಲ್ಲಿಕಾರ್ಜುನ, ಲಕ್ಷ್ಮಣ ಬ್ಯಾಲ್ಯಾಳ, ಯಮನಪ್ಪ ತುಬಾಕಿ, ದ್ಯಾಮಣ್ಣ ಬಿರಾದಾರ, ಮಹೇಶ ತೆಲಗಿ, ಸತೀಶ ಮುಕಾರ್ತಿಹಾಳ, ರಮೇಶ ಅಸ್ಕಿ, ನಿಜವ್ವ ಗಾಂಜಿ, ಯಲ್ಲವ್ವ ಗುರುವರ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

### ಆಲಮಟ್ಟಿ ಉದ್ಯಾನ ಬಂದ್

ದಿನಗೂಲಿ ಕಾರ್ಮಿಕರ ಪ್ರತಿಭಟನೆ ಕಾರಣ ಆಲಮಟ್ಟಿ ಉದ್ಯಾನಗಳನ್ನು ಬಂದ್ ಮಾಡಲಾಗಿತ್ತು. ಪ್ರತಿಭಟನೆ ಮುಕ್ತಾಯಗೊಂಡ ನಂತರ ಮಧ್ಯಾಹ್ನ 3 ಗಂಟೆಯ ನಂತರ ಉದ್ಯಾನ ಯಥಾ ರೀತಿ ಆರಂಭಗೊಂಡವು.